SANJE VAANI

# ಸಂಜೆ ವಾಣಿ

1982

ಬೆಂಗಳೂರು - ಹುಬ್ಬಳ್ಳಿ - ಗುಲ್ಬರ್ಗ - ಬಳ್ಳಾರಿ - ಮೈಸೂರು - ಮಂಗಳೂರು - ದಾವಣಗೆರೆ - ತುಮಕೂರು - ರಾಯಚೂರು ಸಂಪರ್ಕಿಸಿ: 94498 71868

ಬೆಂಗಳೂರು ಶನಿವಾರ 6-2-2010 ಕನ್ನಡ ದಿನಪತ್ರಿಕೆ ಸಂಪುಟ 28 ಸಂಚಿಕೆ 58 ಪುಟ 8 ಬೆಲೆ 2.50 ರೂ. RNI NO.36667/82 Fax: 080-22868484 http://www.sa

8 °C ಕನಿಷ್ಠ 14 °C ಇಂದಿನ ಡಾಲರ್ ಬೆಲೆ: 46.79 ರೂ. ಬೆಂಗಳೂರು ಶನಿವಾರ 6 ಫೆಬ್ರವರಿ 2010

# 2 ಹಂತಗಳಲ್ಲಿ 2011ರ ಜನಗಣತಿ

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಫೆ. ೬- 2011ರ ಜನಗಣತಿ ಕಾರ್ಯಕ್ರಮ ಬರುವ ಏಪ್ರಿಲ್ 15 ರಿಂದ ಆರಂಭವಾಗಲಿದ್ದು, ಎರಡು ಹಂತಗಳಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದು ರಾಷ್ಟ್ರದ ಜನಗಣತಿ ಆಯುಕ್ತ ಹಾಗೂ ರಿಜಿಸ್ಟ್ರಾರ್ ಜನರಲ್ ಡಾ.ಸಿ. ಚಂದ್ರಮೌಳಿ ಅವರಿಲ್ಲಿ ಇಂದು ತಿಳಿಸಿದರು.

ಏಪ್ರಿಲ್ 15 ರಿಂದ ಜೂನ್ 1ರ ತನಕ ಮನೆಗಳ ಪಟ್ಟಿ ಮತ್ತು ಮನೆಗಳ ಗಣತಿ ಕಾರ್ಯ ನಡೆಯಲಿದೆ. ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಜನಸಂಖ್ಯಾ ನೋಂದಣಿಯೂ ನಡೆಯಲಿದೆ. ನಿಜವಾದ ಜನಸಂಖ್ಯಾ ಗಣತಿ ಕೆಲಸ 2011ರ ಫೆ. 9 ರಿಂದ ಫೆ. 28ರ ವರೆಗೆ ನಡೆಯಲಿದೆ. ಇದಾದ ನಂತರ 2011ರ ಮಾರ್ಚ್ 1 ರಿಂದ 5ರ ತನಕ ಪರಿಷ್ಕರಣಾ ಸುತ್ತು ನಡೆಯಲಿದೆ ಎಂದು ಅವರು ಹೇಳಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ರಾಜ್ಯದ ಪ್ರಧಾನ ಜನಗಣತಿ ಅಧಿಕಾರಿಗಳ ಪ್ರಥಮ ಸಮ್ಮೇಳನದಲ್ಲಿ ಪಾಲ್ಗೊಂಡು ಪ್ರಧಾನ ಭಾಷಣ ಮಾಡಿದ ಡಾ. ಚಂದ್ರಮೌಳಿ ಜನಗಣತಿ ಕಾರ್ಯದಲ್ಲಿ 25 ಲಕ್ಷ ಸಿಬ್ಬಂದಿ ಸಕ್ರಿಯವಾಗಿ ಭಾಗವಹಿಸಲಿದ್ದಾರೆ. ಇದಕ್ಕೆ ಮುನ್ನ ಸಿಬ್ಬಂದಿಗೆ ಎಲ್ಲ ರೀತಿಯ ತರಬೇತಿ ನೀಡಲಾಗುವುದು ಎಂದರು.




ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿಂದು ನಡೆದ ಕರ್ನಾಟಕ ರಾಜ್ಯದ ಪ್ರಧಾನ ಜನಗಣತಿ ಅಧಿಕಾರಿಗಳ ರಾಜ್ಯಮಟ್ಟದ ಪ್ರಥಮ ಸಮ್ಮೇಳನದಲ್ಲಿ ಸಚಿವರಾದ ಕರುಣಾಕರರೆಡ್ಡಿ, ಡಾ.ವಿ.ಎಸ್. ಆಚಾರ್ಯ, ಸರ್ಕಾರದ ಪ್ರಧಾನ ಕಾರ್ಯದರ್ಶಿ ಎಸ್.ವಿ. ರಂಗನಾಥ್ ಮುಂತಾದವರು ಪಾಲ್ಗೊಂಡಿದ್ದರು.

2011ರ ಜನಗಣತಿ ದೇಶದಲ್ಲಿ ನಡೆಯುತ್ತಿರುವ 15ನೇ ಜನಗಣತಿಯಾಗಿದ್ದು, ಸ್ವಾತಂತ್ರ್ಯ ನಂತರ ನಡೆಯುತ್ತಿರುವ 7ನೇ ಜನಗಣತಿಯಾಗಿದೆ ಎಂದರು.

ಈ ಕಾರ್ಯಕ್ಕೆ ರಾಜ್ಯ ಮಟ್ಟದ ಮತ್ತು ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಸಂಬಂಧಪಟ್ಟ ಅಧಿಕಾರಿಗಳು ಸಹಕರಿಸಬೇಕು. ಇಂತಹ ರಾಷ್ಟ್ರೀಯ ಆಂದೋಲನ ಯಶಸ್ವಿಯಾಗಿ ನಡೆಯಲು ಪ್ರತಿಯೊಬ್ಬರ ಸಹಕಾರ ಅಗತ್ಯ ಎಂದರು.

ಪ್ರತಿಯೊಂದು ಮಾಹಿತಿಯನ್ನು ಕಲೆ ಹಾಕಿ ಕೊನೆಯಲ್ಲಿ ಆಯಾಯ ಗ್ರಾಮ ಮಟ್ಟದಲ್ಲಿ ಪ್ರದರ್ಶಿಸಲಾಗುವುದು. ಆಕ್ಷೇಪಣೆಗಳಿದ್ದರೂ ಅವುಗಳನ್ನು ಪರಿಶೀಲಿಸಿ ಸರಿಪಡಿಸುವ ಕೆಲಸ ಮಾಡಲಾಗುವುದು ಎಂದರು.

### ಅತ್ಯಂತ ಪ್ರಾಮುಖ್ಯ ಜನಗಣತಿ

2011ರ ಜನಗಣತಿ ಅತ್ಯಂತ ಪ್ರಾಮುಖ್ಯತೆ ಪಡೆದಿದ್ದು, 2001ರ ನಂತರ ಸಾಕಷ್ಟು ಬದಲಾವಣೆಗಳಾಗಿದ್ದು, ಮಾಹಿತಿ ಸಂಗ್ರಹಿಸುವಾಗ ಸಂಬಂಧಪಟ್ಟ ಸಿಬ್ಬಂದಿ ಅತ್ಯಂತ ಜಾಗರೂಕತೆಯಿಂದ ಕೆಲಸ ಮಾಡಬೇಕೆಂದು ಗೃಹ ಸಚಿವ ಡಾ.ವಿ.ಎಸ್. ಆಚಾರ್ಯ ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಉದಾರೀಕರಣ ಮತ್ತು ಜಾಗತೀಕರಣದ ಯುಗದಲ್ಲಿ ಉತ್ಕೃಷ್ಟತೆ ಪ್ರಮುಖ ಪಾತ್ರ ವಹಿಸಲಿದೆ. ಆ ನಿಟ್ಟಿನಲ್ಲಿ ನಾವೆಲ್ಲ ಸಜ್ಜಾಗಿರಬೇಕು ಎಂದರು.

ಅಧ್ಯಕ್ಷ ಭಾಷಣ ಮಾಡಿದ ಕಂದಾಯ ಸಚಿವ ಕರುಣಾಕರ ರೆಡ್ಡಿ ಜನಗಣತಿ ಸಂದರ್ಭದಲ್ಲಿ ಮಾಹಿತಿ ಕಲೆ ಹಾಕುವಾಗ ತುಂಬಾ ಎಚ್ಚರ ವಹಿಸುವ ಆಗತ್ಯ ಇದೆ ಎಂದರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಎಸ್.ವಿ. ರಂಗನಾಥ್ ಮಾತನಾಡಿ, ಜನಗಣತಿ ಕಾರ್ಯದಲ್ಲಿ ಪಾಲ್ಗೊಳ್ಳುವ ಸಿಬ್ಬಂದಿಗೆ ಸೂಕ್ತ ತರಬೇತಿ ನೀಡಲು ಜನಗಣತಿ ಆಯುಕ್ತರು ಕಾರ್ಯಕ್ರಮ ರೂಪಿಸಬೇಕೆಂದರು.

ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳು ಮತ್ತಿತರ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.